**ಗುಂಡ:** ಸುಬ್ಬಿ! ಇಲ್ ಕೇಳೇ... ನಾಳೆ ಭಾನುವಾರ ಬಿ.ಬಿ.ಎಂ.ಪಿ ಕಡೆಯವರು ನಮ್ಮ ಬಡಾವಣೆಯಲ್ಲಿ ಕೋತಿಗಳನ್ನು ಹಿಡಿಯಲು ಬರುತ್ತಾರಂತೆ! ಸಾರ್ವಜನಿಕರು ಸಹಕರಿಸಿ ಅಂತಾ ಮನವಿ ಮಾಡಿದ್ದಾರೆ ಕಣೆ!
**ಸುಬ್ಬಿ:** ಅಯ್ಯೋ ಒಳ್ಳೇದೇ ಆಯ್ತು ಬಿಡಿ, ಇತ್ತೀಚೆಗೆ ಕೋತಿಗಳ ಕಾಟ ತುಂಬಾ ಜಾಸ್ತಿ ಆಗಿದೆ!
**ಗುಂಡ:** ಲೇ ಪೆದ್ದಿ! ನಾನ್ ಹೇಳೋದು ಸ್ವಲ್ಪ ಕೇಳೇ... ಆ ನಿನ್ ತರ್ಲೆ ಮಗ ಮರಿ ಸುಬ್ಬನ್ನ ನಾಳೆ ಅಪ್ಪಿ ತಪ್ಪಿಯೂ ಮನೆಯಿಂದ ಹೊರಗೆ ಬಿಡಬೇಡ ಕಣೆ! ಗ್ರಹಚಾರ!

***

**ಸುಬ್ಬ:** ಅಲ್ಲಯ್ಯಾ ಗುಂಡ... ನಿನ್ನ ಮೊಬೈಲ್ ನಂಬರ್ ಕೇಳಿದ್ರೆ ನೀನು ಇಷ್ಟು ಉದ್ದದ ನಂಬರ್ ಕೊಡ್ತಾ ಇದೀಯಲ್ಲಾ. ಇದು ಸರಿನಾ?
**ಗುಂಡ:** (ಕೂಲಾಗಿ) ಏನಿಲ್ಲಾ, ಮೊನ್ನೆ ತಾನೇ ನನ್ನ ಆಧಾರ್ ಕಾರ್ಡ್ ನಂಬರ್‌ಗೆ ನನ್ನ ಮೊಬೈಲ್ ನಂಬರ್ ಜೋಡಿಸಿ ಬಿಟ್ಟಿದ್ದೇನೆ. ಅದಕ್ಕೆ ಮೊಬೈಲ್ ನಂಬರ್ ಅಷ್ಟು ಉದ್ದವಾಗಿದೆ!

***

**ಬ್ಯಾಂಕ್ ಮ್ಯಾನೇಜರ್:** ಅಲ್ರೀ... ನಾನು ನಿಮಗೆ ಸುಲಭವಾದ ಸೇವಿಂಗ್ಸ್ ಅಕೌಂಟ್ ಖಾತೆ ಕೊಟ್ಟಿದ್ದೇನೆ! ಆದ್ರೆ ನೀವು ಯಾಕೆ ಕರೆಂಟ್ ಅಕೌಂಟ್ ಖಾತೆನೇ ಬೇಕು ಅಂತ ಹಟ ಮಾಡ್ತಾ ಇದೀರಾ?
**ಗುಂಡ:** ಅಯ್ಯೋ, ಹಾಗೇನೂ ಇಲ್ಲ! ನಾನು ಬೆಸ್ಕಾಂನಲ್ಲಿ ಕೆಲಸ ಮಾಡುತ್ತೇನೆ. ಅದಕ್ಕೆ ಸಾರ್!


***

**ಗುಂಡ:** ಸುಬ್ಬ... ಆ ರೌಡಿ ಶೀಟರ್ ಕರಿಯ ನನ್ನ ಮಗಳನ್ನ ಕಿಡ್ನ್ಯಾಪ್ ಮಾಡಿ, ಮದುವೆನೂ ಮಾಡ್ಕೊಂಡು ಈಗ ಬೀಗರ ಔತಣಕ್ಕೆ ಬನ್ನಿ ಅಂತ ನನ್ನನ್ನೇ ಕರೆಯೋಕೆ ಬಂದಿದ್ದ! ಎಂಥಾ ಅಯೋಗ್ಯ ನೋಡಿದ್ಯಾ?
**ಸುಬ್ಬ:** ಹೌದಾ! ಎಷ್ಟು ಧೈರ್ಯ? ಆಮೇಲೆ ನೀನು ಏನು ಮಾಡ್ದೆ?
**ಗುಂಡ:** ಆಹಾ, ಸುಮ್ನೆ ಬಿಡ್ತೀನಾ? ಹೋದೆ! ಹೋಗಿ ಊಟ ಮಾಡ್ಕೊಂಡೇ ಬಂದೆ!

***

**ಗುಂಡ:** ಡಾಕ್ಟ್ರೇ, ಇಂಥ ಕೊರೊನಾ ಟೈಮ್‌ನಲ್ಲಿ ನೀವು ನಮಗೆ ಮಾಡಿರುವ ಉಪಕಾರಕ್ಕೆ ಯಾವ ರೀತಿ ಬೆಲೆ ಕೊಡಬೇಕೊ ಅಂತಾನೇ ಗೊತ್ತಾಗ್ತಿಲ್ಲ?
**ಡಾಕ್ಟರ್:** ಛೇ... ಛೇ... ಯಾಕ್ ಹಾಗಂತೀರಿ? ಫೋನ್ ಪೇ, ಗೂಗಲ್ ಪೇ, ಚೆಕ್ ಲೀಫ್, ಮನಿ ಟ್ರಾನ್ಸ್‌ಫರ್ ಹೀಗೆ ಯಾವುದು ಬೇಕಾದ್ರೂ ಆಗುತ್ತೆ! ನಿಮ್ಮ ಅನುಕೂಲಕ್ಕೆ ತಕ್ಕಂತೆ ಮಾಡಿ!

***




ಕೇಂದ್ರದಿಂದ ಎಚ್ಚರಿಕೆ ಅಂದ್ರೆ ರಾಜ್ಯದವರು ಮಾಸ್ಕ್ ಬಳಕೆ ಮಾಡದಿದ್ದರೆ ದಂಡ ವಿಧಿಸುವಿಕೆ ಯೋಜನೆ ಮುಂದುವರೆಸ್ತಾರೆ ಅಲ್ವೇನೊ!

**ಗುಂಡ:** ಸುಬ್ಬ ನಿಂಗೆ ಗೊತ್ತಾ? ನನ್ನ ಅಳಿಯ ಕಳೆದ ಎಂಟು ವರ್ಷಗಳಲ್ಲಿ ಒಂದೇ ಒಂದು ಬಾರಿ ನಮ್ಮ ಮನೆಗೆ ಬಂದಿದ್ದ!
**ಸುಬ್ಬ:** ವಾಹ್... ಒಳ್ಳೆಯ ಮನುಷ್ಯ ಅಂಥ ಕಾಣ್ಸುತ್ತೆ. ಅಂದ ಹಾಗೆ ಯಾವಾಗ ಬಂದಿದ್ದ?
**ಗುಂಡ:** ಮದುವೆ ಆದ ಕೂಡಲೇ ನಮ್ ಮನೆಗೆ ಬಂದವನು ಈವರೆಗೂ ಹೋಗಿಯೇ ಇಲ್ಲಾ ಅಂತೀನಿ!

***

**ಜಡ್ಜ್:** ಏನಪ್ಪಾ... ನಿನ್ನ ಪರವಾಗಿ ವಾದ ಮಾಡಲು ವಕೀಲರನ್ನು ನೇಮಿಸಿಕೊಂಡಿದ್ದೀಯಾ?
**ಗುಂಡ:** ಇಲ್ಲಾ ಮಹಾಸ್ವಾಮಿ... ನಾನು ಈ ಬಾರಿ ಪೂರ್ತಿ ಸತ್ಯವನ್ನೇ ಹೇಳಬೇಕು ಅಂತ ಅಂದುಕೊಂಡಿದ್ದೇನೆ!

***

**ನಿಂಗಿ:** ಒಲ್ಲದ ಮನಸ್ಸಿಂದ ವರ್ಷಕ್ಕೊಮ್ಮೆ ಮಗಳನ್ನು ಅಳಿಯ ನಮ್ಮ ಮನೆಗೆ ಕಳಿಸ್ತಾನೆ.
**ರಂಗಿ:** ಹೌದಾ? ನಮ್ಮ ಅಳಿಯ ಪ್ರತಿ ತಿಂಗಳಾರಂಭಕ್ಕೆ ಒತ್ತಾಯ ಮಾಡಿ ಕಳಿಸ್ತಾನೆ.
**ನಿಂಗಿ:** ಹೌದಾ ಯಾಕೆ?
**ರಂಗಿ:** ಇನ್ನೇನಕ್ಕೆ, ದಿನಸಿ ಐಟಂ ತರೋದಕ್ಕೆ.

***

**ಗುಂಡ:** ದೀರ್ಘ ಕಾಲ ಯೋಚನೆಗಳೇ ಇಲ್ಲದ ಹಾಗೆ ಬದುಕಲು ಏನು ಮಾಡಬೇಕು ಡಾಕ್ಟ್ರೇ?
**ಡಾಕ್ಟರ್:** ಅಯ್ಯೋ ಅಷ್ಟೇನಾ? ನೀನೊಂದು ಮದುವೆ ಮಾಡ್ಕೊ. ಆಮೇಲೆ ಯಾವ ಯೋಚನೆಯೂ ಇರುವುದೇ ಇಲ್ಲ!
**ಗುಂಡ:** ಅದು ಹೇಗೆ ಸಾಧ್ಯ ಡಾಕ್ಟ್ರೇ?
**ಡಾಕ್ಟರ್:** ಮದುವೆ ಆದ ಮೇಲೆ ನಿನಗೆ ಯಾವುದೇ ಯೋಚನೆ ಮಾಡಲೂ ಟೈಮ್ ಇರೋದೇ ಇಲ್ಲ!

(ಗುಂಡನ ಮಗ ಮರಿ ಸುಬ್ಬ ಮಹಾ ತರಲೆ)
**ಮೇಷ್ಟ್ರು:** ಸುಬ್ಬ... ನಿಮ್ ಅಪ್ಪ ಯಾರು?
**ಮರಿ ಸುಬ್ಬ:** ನಮ್ಮ ಅಮ್ಮನ ಗಂಡ!
**ಮೇಷ್ಟ್ರು:** ನಿಮ್ಮ ಅಮ್ಮ ಯಾರು?
**ಮರಿ ಸುಬ್ಬ:** ನಮ್ಮ ಅಪ್ಪನ ಹೆಂಡತಿ!
**ಮೇಷ್ಟ್ರು:** ಹೋಗ್ಲಿ, ನಿಮ್ಮ ಅಪ್ಪ–ಅಮ್ಮ ಯಾರು?
**ಮರಿ ಸುಬ್ಬ:** ಅಯ್ಯೋ ಮೇಷ್ಟ್ರೇ, ಇಷ್ಟು ಹೇಳಿದ್ರೂ ಗೊತ್ತಾಗಲ್ವಾ? ಅವರಿಬ್ಬರೂ ಗಂಡ ಹೆಂಡತಿ!

***

**ಡಾಕ್ಟರ್:** ಇದೇನಯ್ಯಾ ಗುಂಡ... ನಾನು ಬರೆದು ಕೊಟ್ಟ ಮಾತ್ರೆಗಳನ್ನು ತಂದು ತೋರಿಸು ಅಂತ ಹೇಳಿದ್ರೆ ನೀನು ಎಲ್ಲಾ ಮಾತ್ರೆಗಳ ಅಂಚನ್ನೇ ಕತ್ತರಿಸಿ ತಂದಿದ್ದೀಯಾ?
**ಗುಂಡ:** ಅಂಗಡಿಯವನು ಸರಿಯಾಗೇ ಕೊಟ್ಟಿದ್ದ ಡಾಕ್ಟ್ರೇ! ಆದ್ರೆ ಅಕಸ್ಮಾತ್ ನನಗೆ ಸೈಡ್ ಎಫೆಕ್ಟ್ ಆಗ್ದೆ ಇರ್ಲಿ ಅಂತ ಮಾತ್ರೆಗಳ ಸೈಡ್ ಅನ್ನ ನಾನೇ ಕತ್ತರಿಸಿ ಬಿಸಾಡಿದೆ!

***

**ಗುಂಡ:** ( ಪುಸ್ತಕದ ಅಂಗಡಿಯಲ್ಲಿ) ಒಂದು ಒಳ್ಳೆಯ ಪತ್ತೇದಾರಿ ಮತ್ತು ಥ್ರಿಲ್ಲರ್ ಕಾದಂಬರಿಯ ಪುಸ್ತಕ ಕೊಡಿ.
**ಅಂಗಡಿಯವ:** ಈ ಪುಸ್ತಕ ತಗೊಳ್ಳಿ ಸಾರ್! ಎಷ್ಟು ಸಸ್ಪೆನ್ಸ್ ಮತ್ತು ಥ್ರಿಲ್ಲಿಂಗ್ ಆಗಿ ಇದೆ ಅಂದ್ರೆ, ನಾಯಕನ ಹೆಂಡತಿನೆ ಇದೆಲ್ಲಾ ಮಾಡಿದ್ದು ಅಂತ ಕೊನೆಯ ಪುಟ ಓದುವವರೆಗೂ ಗೊತ್ತಾಗೋದೆ ಇಲ್ಲ!
**ಗುಂಡ:** ಈ ಪುಸ್ತಕ ಬೇಡವೇ ಬೇಡ.
**ಅಂಗಡಿಯವ:** ಯಾಕೆ ಸರ್? ನೀವ್ ಕೇಳಿದ ಸಸ್ಪೆನ್ಸ್ ಮತ್ತು ಥ್ರಿಲ್ಲಿಂಗ್ ಕಾದಂಬರಿ ಪುಸ್ತಕ ಇದೆ!
**ಗುಂಡ:** ಸಸ್ಪೆನ್ಸ್ ಮತ್ತು ಥ್ರಿಲ್ಲಿಂಗ್ ವಿಷಯವನ್ನು ನೀನೇ ಹೇಳ್ಬಿಟ್ಟಿದ್ದೀಯ. ಇನ್ನು ಈ ಪುಸ್ತಕ ತಗೊಂಡೋಗಿ ಹೊಸದಾಗಿ ಏನನ್ನ ಓದಲಿ?

***

**ಗುಂಡ:** ನನ್ ಮಗಳು ಎಷ್ಟು ಬೆಳೆದು ಬಿಟ್ಟಿದ್ದಾಳೆ ಅನ್ನೋದು ಮೊನ್ನೆ ಅವಳಿಗೆ ಫೋನ್ ಕೊಡಿಸಿದ ಮೇಲೆ ಗೊತ್ತಾಯಿತು!
**ಸುಬ್ಬ:** ಅರೇ... ಫೋನ್‌ಗೂ ನಿನ್ ಮಗಳು ಬೆಳೆಯೋಕು ಏನಯ್ಯಾ ಸಂಬಂಧ?
**ಗುಂಡ:** ಇಲ್ ಕೇಳೋ! ಅವ್ಳಿಗೆ ದಿನಕ್ಕೆ ಏನಿಲ್ಲ ಅಂದ್ರೂ ಹತ್ತಿಪ್ಪತ್ತು ಹುಡುಗರಿಂದ ಫೋನ್ ಕಾಲ್ ಬರ್ತಾನೇ ಇರ್ತದೆ ಅಂತೀನಿ!

–ಆರ್. ವೀರೇಶ್ ಕುಮಾರ್,
ಬೆಂಗಳೂರು